ರಾಜ್ಯದ ಸಿಬ್ಬಂದಿ ವರ್ಗದ ವಿವರ

188 (1079 ಎ) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):–

ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದಲ್ಲಿನ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು ಹಾಗೂ ಅವುಗಳ ದರ್ಜೆಗಳ ವಿವರ ಏನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ದಿನಾಂಕ 1-04-1992ರಲ್ಲಿರುವಂತೆ:–

5,63,210

ವಿವರಗಳು:

ಗ್ರೂಪ್ – ಎ – 69,360
ಗ್ರೂಪ್ – ಬಿ – 25,954
ಗ್ರೂಪ್ – ಸಿ – 3,59,769
ಗ್ರೂಪ್ – ಡಿ – 1,08,127

ಚಾಮರಾಜನಗರಕ್ಕೆ ಹೆಚ್ಚಿನ ಬಸ್‌ಗಳು

1090 (1076) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):–

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರಕ್ಕೆ ಬೆಂಗಳೂರು ಮತ್ತು ಮೈಸೂರುಗಳಿಂದ ಹೆಚ್ಚಿನ ಬಸ್‌ಗಳನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಚಾಮರಾಜನಗರವು ರಾಷ್ಟ್ರೀಕೃತವಾಗದ ಪ್ರದೇಶದಲ್ಲಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಟ್ಟು 31 ಟ್ರಿಪ್‌ಗಳನ್ನು ಮೈಸೂರಿನಿಂದಲೂ 20 ಟ್ರಿಪ್‌ಗಳನ್ನು ಮೈಸೂರಿನಿಂದಲೂ ಚಾಮರಾಜನಗರಕ್ಕೆ ಕಾರ್ಯಾಚರಣೆ ನಡೆಸುತ್ತಿದೆ.

ಈ ಮೇಲಿನ ಸಾರಿಗೆಗಳು ಚಾಮರಾಜ ನಗರದ ಪ್ರಯಾಣಿಕರ ಬೇಡಿಕೆಗಳನ್ನು ತೃಪ್ತಿಕರವಾಗಿ ಪೂರೈಸುತ್ತಿದೆ.

ಸಾರಿಗೆ ಸಂಸ್ಥೆಯ ಚಾಲ್ತಿ ಬಸ್‌ಗಳ ಸಂಖ್ಯೆ

191 (1077) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):–

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿರುವ ರಸ್ತೆ ಸಾರಿಗೆ ಸಂಸ್ಥೆಯ ಚಾಲ್ತಿ ಬಸ್ಸುಗಳ ಸಂಖ್ಯೆ ಎಷ್ಟು, (ಅವುಗಳ ಜಿಲ್ಲಾವಾರು ಸಂಖ್ಯೆ ನೀಡುವುದು);